# ವೈದ್ಯಕೀಯ ವಿದ್ಯಾರ್ಥಿಗಳ ಕಾಲ್ನಡಿಗೆ ಜಾಥಾ

**ಕ.ಪ್ರ.ವಾರ್ತೆ | ಮೈಸೂರು | ಆ. 26**

ಪದವಿ ಹಾಗೂ ಸ್ನಾತಕೋತ್ತರ ಪದವಿ ಸೀಟುಗಳನ್ನು ಸಮನಾಗಿಸುವಂತೆ ಒತ್ತಾಯಿಸುವ ಸಲುವಾಗಿ ವೈದ್ಯಕೀಯ ವಿದ್ಯಾರ್ಥಿಗಳು ಸೋಮವಾರ ಕಾಲ್ನಡಿಗೆ ಜಾಥಾ ನಡೆಸಿದರು.

ಭಾರತೀಯ ವೈದ್ಯಕೀಯ ಸಂಘ (ಐಎಂಎ) ಹಾಗೂ ಆರೋಗ್ಯ ರಕ್ಷಣೆ ಪೂರೈಕೆ ಸಂಘದ (ಎಎಚ್‌ಪಿಐ) ಮುಂದಾಳತ್ವದಲ್ಲಿ ರೂಪಿಸಿರುವ ಸೇವ್ ದಿ ಡಾಕ್ಟರ್ಸ್ ಚಳವಳಿಯ ಅಂಗವಾಗಿ ಜೆ.ಕೆ. ಆವರಣದಲ್ಲಿ ಏರ್ಪಡಿಸಿದ್ದ ಈ ಜಾಥಾದಲ್ಲಿ ಬಿಳಿ ಕೋಟು ಧರಿಸಿದ್ದ ವೈದ್ಯಕೀಯ ವಿದ್ಯಾರ್ಥಿಗಳು ಕಪ್ಪು ಪಟ್ಟಿ ಧರಿಸಿ ಬೇಡಿಕೆಗಾಗಿ ಒತ್ತಾಯಿಸಿದರು.




ಮೈಸೂರಿನಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಕಾಲ್ನಡಿಗೆ ಜಾಥಾ ನಡೆಸಿದರು.

ಭಾರತದಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಸೀಟುಗಳು ಕಡಿಮೆ ಇರುವ ಕಾರಣ, ತಜ್ಞ ವೈದ್ಯರ ಸಮಸ್ಯೆ ಎದುರಾಗಿ, ರೋಗಿಗಳು ದಿನಗಟ್ಟಲೆ ಕಾಯಬೇಕಿದೆ. ಆದ್ದರಿಂದ ಪದವಿ ಹಾಗೂ ಸ್ನಾತಕೋತ್ತರ ಪದವಿ ಸಮಾನ ಸೀಟುಗಳನ್ನು ಕಲ್ಪಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯವನ್ನು ಒತ್ತಾಯಿಸುವ ಸಲುವಾಗಿ ಈ ಚಳವಳಿಯನ್ನು ದೇಶಾದ್ಯಂತ ಹಮ್ಮಿಕೊಳ್ಳಲಾಗಿದೆ ಎಂದು ವಿದ್ಯಾರ್ಥಿ ಮುಖಂಡರು ತಿಳಿಸಿದರು. ಮುಖಂಡರಾದ ಡಾ. ಗುರುತೇಜಾ, ನವೀನ್, ಸಿಂಧು ರಾಜಶೇಖರನ್, ಸೌರವ್ ಮುಜೂಂದಾರ್ ಇತರರು ನೇತೃತ್ವ ವಹಿಸಿದ್ದರು. ನಂತರ ಅಲ್ಲಿಂದ ಹೊರಟ ಕಾಲ್ನಡಿಗೆ ಜಾಥಾವು ಮೈಸೂರಿನ ವೈದ್ಯಕೀಯ ಕಾಲೇಜು, ಸರ್ಕಾರಿ ಆಯುರ್ವೇದ ಕಾಲೇಜು ಮುಖಾಂತರ ಗಾಂಧಿ ಚೌಕದಲ್ಲಿ ಮುಕ್ತಾಯವಾಯಿತು.